ಅಗತ್ಯವಾದ ಕಡೆ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದ್ದು, ಇದೊಂದು ಸತತವಾದ ಪ್ರಕ್ರಿಯೆಯಾಗಿದೆ.

**1641 (1836) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ)** :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಕನ್ನಡಕ್ಕೆಂದು ಅನುಮತಿ ಪಡೆದು ನಡೆಸುತ್ತಿರುವ ಆಂಗ್ಲ ಮಾಧ್ಯಮ ಶಾಲೆಗಳ ಸಂಖ್ಯೆ ಎಷ್ಟು;

ಆ) ಈ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

ಇ) ಈ ಶಾಲೆಗಳನ್ನು ಮುಚ್ಚಲು ಸರ್ಕಾರ ಆದೇಶಿಸಿದೆಯೇ;

ಈ) ಈ ರೀತಿ ಮುಚ್ಚುವುದರಿಂದ ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ ಬೇರೆ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಪ್ರವೇಶ ದೊರಕಿಸಿಕೊಡಲು ಸರ್ಕಾರ ಕೈಗೊಂಡ ಕ್ರಮಗಳೇನು;

ಉ) ಈಗ ನಡೆಯುತ್ತಿರುವ ಇಂತಹ ಶಾಲೆಗಳನ್ನು ಮುಂದುವರೆಸಲು ಸರ್ಕಾರ ನಿರ್ಧರಿಸಿದೆಯೇ?

**ಶ್ರೀ ಬಸವರಾಜ್ ಎಸ್. ಹೊರಟ್ಟಿ ( ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**:

ಅ) ರಾಜ್ಯದಲ್ಲಿ ಕನ್ನಡಕ್ಕೆಂದು ಅನುಮತಿ ಪಡೆದು ನಡೆಸುತ್ತಿರುವ ಆಂಗ್ಲ ಮಾಧ್ಯಮ ಶಾಲೆಗಳು :– 2698, ಬೆಂಗಳೂರಿನಲ್ಲಿ :– 1513 ಶಾಲೆಗಳು

ಆ) ರಾಜ್ಯದಲ್ಲಿ 300526 ವಿದ್ಯಾರ್ಥಿಗಳು, ಬೆಂಗಳೂರಿನಲ್ಲಿ 1,67,565 ವಿದ್ಯಾರ್ಥಿಗಳು

ಇ) ರಾಜ್ಯದಲ್ಲಿ ಸಕ್ಷಮ ಪ್ರಾಧಿಕಾರಿಗಳು 2215 ಶಾಲೆಗಳ ಮಾನ್ಯತೆಯನ್ನು ಹಿಂಪಡೆದು ಆದೇಶ ಹೊರಡಿಸಿರುತ್ತಾರೆ.

ಈ) ಸದರಿ ಶಾಲೆಗಳ ಮಾನ್ಯತೆಯನ್ನು ಸಕ್ಷಮ ಪ್ರಾಧಿಕಾರಗಳು ಶೈಕ್ಷಣಿಕ ವರ್ಷಗಳ ಮಧ್ಯದಲ್ಲಿ ಹಿಂಪಡೆದು ಆದೇಶಗಳನ್ನು ಹೊರಡಿಸಿದ್ದು, ಆ ಹಂತದಲ್ಲಿ ವಿದ್ಯಾರ್ಥಿಗಳನ್ನು ಇತರೆ ಯಾವುದೇ ಶಾಲೆಗೆ ಸೇರಿಸಿದಲ್ಲಿ ಅವರ ಮೇಲೆ ಪ್ರತಿಕೂಲ

ಪರಿಣಾಮ ಬೀರುತ್ತದೆಂಬ ಕಾರಣಕ್ಕಾಗಿ, ಆ ಆದೇಶಗಳ ಜಾರಿಗೊಳಿಸುವಿಕೆಯನ್ನು ಪ್ರಸಕ್ತ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಅಂದರೆ, ದಿನಾಂಕ 10–04–2007 ರವರೆಗೆ ತಡೆಹಿಡಿಯತಕ್ಕದೆಂದು ಸರ್ಕಾರದ ದಿನಾಂಕ 6–11–2006 ಆದೇಶ ಸಂಖ್ಯೆ : ಇಡಿ 203 ಪಿಜಿಸಿ 2006 ರನ್ವಯ ಆದೇಶಿಸಲಾಗಿದೆ.

ಅನಧಿಕೃತ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ, ಮುಂದಿನ ಶೈಕ್ಷಣಿಕ ಸಾಲಿನಿಂದ ಸದರಿ ಶಾಲೆಗಳ ಸುತ್ತಮುತ್ತಲಿನ ಸರ್ಕಾರಿ ಶಾಲೆಗಳು, ಅನುದಾನಿತ ಶಾಲೆಗಳು ಹಾಗೂ ಅನುದಾನರಹಿತ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮುಂದುವರೆಸಲು ಪರ್ಯಾಯ ವ್ಯವಸ್ಥೆ ಕಲ್ಪಿಸಲು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ತಿಳಿಸಲಾಗಿದೆ.

ಉ) ಈ ಶಾಲೆಗಳ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

**1642 (1837) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ)** :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಸಿ.ಇ.ಟಿ ಘಟಕದಲ್ಲಿ ಖಾಯಂ ಹಾಗೂ ಒಪ್ಪಂದದ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ ಎಷ್ಟು;

ಆ) ಈ ಸಿಬ್ಬಂದಿಗೆ ಪ್ರತಿ ತಿಂಗಳು ನೀಡುವ ವೇತನವೆಷ್ಟು;

ಇ) ಈ ಸಿಬ್ಬಂದಿ ಸಿ.ಇ.ಟಿ ನಡೆಯುವ ವೇಳೆಯಲ್ಲಿ 10–12 ಘಂಟೆಗಳ ಕಾಲ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಪ್ರತಿವರ್ಷ ಸಿ.ಇ.ಟಿ ಘಟಕಕ್ಕೆ ವಿದ್ಯಾರ್ಥಿಗಳಿಂದ ಬರತಕ್ಕ ಹಣವೆಷ್ಟು;

ಉ) ಸಿ.ಇ.ಟಿ ಘಟಕದಲ್ಲಿ ವರ್ಷವಿಡಿ ಪೂರ್ವಭಾವಿ ಸಿದ್ಧತೆ ಹಾಗೂ ಇತರ ಕೆಲಸಗಳಿರುವುದರಿಂದ ಹಲವಾರು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಖಾಯಂಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

**ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)** :